ಅನುಬಂಧ–3

ಆದೇಶ ಸಂಖ್ಯೆ: ಕೃಇ/61/ಕೃಉಇ/2013. ದಿನಾಂಕ: 31–1–2014

# ರಚನೆ (Structure)

1. ಅತ್ಯುತ್ತಮ ಶೈಕ್ಷಣಿಕ ಹಿನ್ನೆಲೆ ಮತ್ತು ಕೃಷಿ ಮಾರುಕಟ್ಟೆ ಸೇರಿದಂತೆ ಕೃಷಿ ಅರ್ಥಶಾಸ್ತ್ರದಲ್ಲಿ ಪರಿಣಿತಿ ಹೊಂದಿರುವ ಕೃಷಿ ತಜ್ಞರವರ ಅಧ್ಯಕ್ಷತೆಯ ನೇತೃತ್ವದಲ್ಲಿ ಕರ್ನಾಟಕ ಕೃಷಿ ಬೆಲೆ ಆಯೋಗ ಕಾರ್ಯ ನಿರ್ವಹಿಸುವುದು.

2. ಅಧ್ಯಕ್ಷರಿಗೆ ಸಹಕಾರಿಯಾಗಿ ಐದು ಸದಸ್ಯರಿರುವುದು, ಇದರಲ್ಲಿ ಸರ್ಕಾರದಿಂದ ಒಬ್ಬ ಸದಸ್ಯ, ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುವರು.

3. ಐದು ಸದಸ್ಯರುಗಳಲ್ಲಿ ಕೃಷಿ ಅರ್ಥಶಾಸ್ತ್ರ ಕ್ಷೇತ್ರದಲ್ಲಿ ಕೃಷಿ ಮಾರಾಟ/ಕೃಷಿ ನಿರ್ವಹಣೆ ಇತ್ಯಾದಿ ಸಂಬಂಧಪಟ್ಟ ಕ್ಷೇತ್ರಗಳಲ್ಲಿ ಪರಿಣಿತಿ ಹೊಂದಿರುವ ಇಬ್ಬರು ಅಧಿಕಾರಿ ಸದಸ್ಯರು.

4. ಇಬ್ಬರು ಅಧಿಕಾರೇತರ ಸದಸ್ಯರು – ಪ್ರಗತಿಪರ ದೃಷ್ಟಿಕೋನವನ್ನು ಹೊಂದಿರುವ ರೈತರು ಮತ್ತು ಕೃಷಿ ಉತ್ಪನ್ನಗಳ ಮಾರಾಟದ ಬಗ್ಗೆ ಅನುಭವ ಹೊಂದಿರುವವರು.

5. ಸಮಿತಿ ಕೆಲಸ ನಿರ್ವಹಿಸಲು ಇತರೆ ಸಿಬ್ಬಂದಿ ಮತ್ತು ತಾಂತ್ರಿಕ ಸಿಬ್ಬಂದಿಯನ್ನು ರಾಜ್ಯ ಸರ್ಕಾರದ ಇಲಾಖೆಗಳು/ಕೃಷಿ/ತೋಟಗಾರಿಕೆ ವಿಶ್ವವಿದ್ಯಾಲಯಗಳಿಂದ ನಿಯೋಜನೆ ಮೇರೆಗೆ/ಇತರೆ ಸಿಬ್ಬಂದಿಯನ್ನು ಕರಾರಿನ ಆಧಾರದ ಮೇರೆಗೆ ಪಡೆಯುವುದು.

6. ಕೃಷಿ ಬೆಲೆ, ಮಾರುಕಟ್ಟೆ ಮತ್ತು ವ್ಯಾಪಾರ ಕ್ಷೇತ್ರಗಳಲ್ಲಿ ತಜ್ಞರು/ವೃತ್ತಿಪರರನ್ನು ನಿಯೋಜನೆ/ಒಪ್ಪಂದ/ ಹೊರಗುತ್ತಿಗೆ ಆಧಾರದ ಮೇರೆಗೆ ಪಡೆಯುವುದು.

7. ಕರ್ನಾಟಕ ಕೃಷಿ ಬೆಲೆ ಆಯೋಗದ ಪ್ರಸ್ತಾವಿತ ಅವಧಿ ಮೂರು ವರ್ಷಗಳು